ಪ್ರಧಾನ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ
ಹುಬ್ಬಳ್ಳಿ
ಮೊಕದ್ದಮೆ ಸಂಃ ಸಿ ಸಿ 226/2012

ಸಿಡಬ್ಲ್ಯೂ.53
ಪಿಡಬ್ಲ್ಯೂ.30

| | |
|---|---|
| ಹೆಸರುಃ ಶೇಖಪ್ಪ ಪೂಜಾರ | ವಯಸ್ಸು ಃ 62 |
| ತಂದೆಯ ಹೆಸರುಃ ಕೃಷ್ಣಪ್ಪ | ಉದ್ಯೋಗಃ ಖಾಸಗಿ ಉದ್ಯೋಗ |
| ವಾಸಸ್ಥಳಃ ಹುಬ್ಬಳ್ಳಿ | |

ದಿಃ 16.09.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ

ನನಗೆ ಆರೋಪಿಗಳ ಪರಿಚಯ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರಿಗೆ ಈ ಪ್ರಕರಣದಲ್ಲಿ ಹೇಳಿಕೆ ನೀಡಿರುವುದಿಲ್ಲ. ನಾನು 1999 ರಿಂದ 31-3-2000 ರವರೆಗೆ ಲೆಕ್ಕ ಸ್ಥಾಯಿ ಸಮೀತಿ ಅಧ್ಯಕ್ಷನಾಗಿದ್ದೆ.

(ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಕಡತವನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ** ಸರ್ಕಾರಿ ಸಹಾಯಕ ಅಭಿಯೋಜಕರಿಂದಃ

ನಾನು ಸ್ಥಾಯಿ ಸಮೀತಿಯ ಅಧ್ಯಕ್ಷನಾದಾಗ ನನ್ನ ಬಳಿ ಅಶೋಕ, ನಂಗೂಪಾಲ, ಅಶೋಕ ಮಲ್ಲಾ, ಪ್ರಕಾಶ ಅರ್ಜುನರಾವ, ಪೂರ್ಣ ಸುಧೀರ, ಲಕ್ಷ್ಮಿಬಾಯಿ ಎಂಬ ಧಾರವಾಡದ ಸದ್ಯಸ್ಯರು ಇದ್ದರು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಏನ್ನುತ್ತಾರೆ. ಹಾಗೆ ಉಳಿದ 5 ಜನ ಸದಸ್ಯರು ಇದ್ದರು ಎಂದರೆ ಸಾಕ್ಷಿ ನೆನಪಿಲ್ಲ ಏನ್ನುತ್ತಾರೆ.

ನಾವು ಪ್ರತಿ ತಿಂಗಳಿನಲ್ಲಿ 2 ಬಾರಿ ಅಂದರೆ ಮೊದಲನೆ ಗುರುವಾರ ಹಾಗೂ ಕೊನೆಯ ಗುರುವಾರ ಸಭೆ ಸೇರಿ ಹಣಕಾಸಿನ ವಿಷಯ ಹಾಗೂ ಸಾರ್ವಜಕನಿಕ ತೊಂದರೆ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದೇವು ಎಂದರೆ ಸಾಕ್ಷಿ ನೆನಪಿಲ್ಲ ಏನ್ನುತ್ತಾರೆ. ಲೆಕ್ಕ ಪರಿಶೋಧನೆ ಇಲಾಖೆಯಲ್ಲಿ 2-3 ವರ್ಷದಿಂದ ಲೆಕ್ಕ ಪರಿಶೋಧನೆ ಆಗಿರುವುದಿಲ್ಲ ಹಾಗೂ ಇದಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲ ಎಂದು ನಮಗೆ ಉತ್ತರ ನೀಡಿದ್ದರು ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಏನ್ನುತ್ತಾರೆ. ನಗರ ಪಾಲಿಕೆಯವರು ಅವರು ಮಾಡುವ ಯಾವುದೇ ಕಾರ್ಯಗಳಿಗೂ ನಮ್ಮ ಸಮೀತಿಯಿಂದ ಒಪ್ಪಿಗೆ ಪಡೆಯುತ್ತಿರಲಿಲ್ಲ ಹಾಗೂ ಅವರು ಯಾವುದೇ ವರದಿಯನ್ನು ನಮಗೆ ಸಲ್ಲಿಸಿರುತ್ತಿರಲಿಲ್ಲ. ನಗರ ಪಾಲಿಕೆ 22 ಲಕ್ಷ್ಯ 50 ಸಾವಿರ 393 ಲುಕ್ಸಾನ ಮಾಡಿದ ಬಗ್ಗೆ ಪ್ರಜಾವಣಿ ದಿನಪತ್ರಿಕೆಯಲ್ಲಿ ಬಂದು ಅದರಲ್ಲಿ 6 ಜನರ ಹೆಸರಿದ್ದು ಅದರಲ್ಲಿ ಒಬ್ಬ ಕಂಟ್ರ್ಯಾಕ್ಟರ ಹೆಸರು ಸಹ ಇತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಏನ್ನುತ್ತಾರೆ. ನಗರ ಪಾಲಿಕೆ ಹಾಗೂ ಪಿ.ಡಬ್ಲ್ಯೂ.ಡಿಯವರು ಮಾಡುವ ಯಾವುದೇ ಕೆಲಸಗಳಿಗೆ ನಮಗೆ ಸಂಬಂಧ ಇಲ್ಲ ಎಂದರೆ ಸರಿ.

ಮೇಲೆ ಹೇಳಿದ ರೀತಿಯಲ್ಲಿ ನಾನು ತನಿಖಾಧಿಕಾರಿಯವರ ಮುಂದೆ ದಿಃ12-11-2000 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ರೀತಿಯಲ್ಲಿ ಹೇಳಿಕೆ ನೀಡಿದ್ದರು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಡತದಲ್ಲಿ ಹೇಳಿಕೆಯ ಜರಾಕ್ಸ ಪ್ರತಿ ಇದ್ದು ಅದನ್ನು ಗುರ್ತಿಸುವ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ಅಕ್ಷೇಪಣೆ ಇಲ್ಲ ಎಂದು ಹೇಳಿದ ಮೇರೆಗೆ ಅದನ್ನು ನಿಶಾನೆ ಪಿ 29 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದಃ ಇಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಎಂ ಒ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ನ್ಯಾಯಾಲಯ,. ಹುಬ್ಬಳ್ಳಿ